3

# ಸಮುವೇಲ

## ಮೀಸಲಾಗಿಟ್ಟ ಜೀವನಕ್ಕೆ ಉದಾಹರಣೆ

ಕೊಲೊಶಿಯದ ಜನರು ರೋಮದವರೊಂದಿಗೆ ಬೇಶರತ್ತಾದ ಕರ ಭಾರವನ್ನು ಕುರಿತು ಚರ್ಚಿಸುತ್ತಿದ್ದಾಗ, ರೋಮದ ಪರವಾಗಿ ಎಗೆರಿಅಸ್ ಎಂಬ ವ್ಯಕ್ತಿ ರಾಯ ಭಾರಿಗಳನ್ನು ಈ ರೀತಿಯಾಗಿ ಪ್ರಶ್ನಿಸಿದನು. "ಕೊಲೊಶಿಯದ ಜನರು ತಮ್ಮದೇ ಅಧಿಕಾರದಡಿಯಲ್ಲಿದ್ದಾರೋ?" ಸಕಾರಾತ್ಮಕ ಉತ್ತರ ದೊರೆತಾಗ ಅವನು ಮತ್ತೆ ಹೀಗೆ ಪ್ರಶ್ನಿಸಿದನು, "ನೀವು ನಿಮ್ಮನ್ನು, ನಿಮ್ಮ ಆಲಯವನ್ನು ನಿಮ್ಮ ಪಾತ್ರೆಗಳನ್ನು, ನಿಮ್ಮ ಆಸ್ತಿಯನ್ನು ನನ್ನ ಕೈಗೆ ಮತ್ತು ರೋಮದ ಜನರ ಅಧಿಕಾರಕ್ಕೆ ಕೊಡುತ್ತೀರೋ?" ಆಗ ಅವರು "ನಾವು ಎಲ್ಲವನ್ನು ಶರಣು ಮಾಡುತ್ತೇವೆ" ಎಂದರು. ಆಗ ಅವನು, "ನಾನು ನಿಮ್ಮನ್ನು ಸ್ವೀಕರಿಸುತ್ತೇನೆ" ಅಂದನು. ಈ ಉದಾಹರಣೆಯು ದೇವರಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಹಳೆ ಒಡಂಬಡಿಕೆಯ ವ್ಯಕ್ತಿ - ಸಮುವೇಲನಿಗೆ ಹೋಲುತ್ತದೆ.

ಪರಿಶುದ್ಧತೆ, ವಿಶ್ವಾಸ ಮತ್ತು ನೀತಿಯ ವಿಷಯಗಳಲ್ಲಿ ಸಮುವೇಲನ ಜೀವನವು ನಿರಂತರ ದಾಖಲೆಯಾಗಿದೆ. ಜನ್ಮದಿಂದ ಮರಣದವರೆಗೆ ಒಂದು ಅತ್ಯುನ್ನತವಾದ ಗುರಿ ಅವನನ್ನು ಆಳುತ್ತಿತ್ತು. ಅವನ ಜೀವನದಲ್ಲಿ ಯಾವ ತಪ್ಪುಗಳಾಗಲಿ, ಬೇಡವಾದ ಜೀಜಗ ಳಾಗಲಿ ಅಥವಾ ಅಕ್ರಮವಾದ ಕಾರ್ಯಗಳಾಗಲಿ ಇರಲಿಲ್ಲ. ಸಾರ್ವಜನಿಕ ಜೀವನದಿಂದ ನಿವೃತ್ತಿಯನ್ನು ಪಡೆಯುವಾಗ ಸಮುವೇಲನು, ತಾನೇನಾದರೂ ತಪ್ಪು ಮಾಡಿದ್ದರೆ ಅದನ್ನು ತಿಳಿಸಿರಿ ಎಂದು ಇಸ್ರಾಯೇಲ್ಯರಿಗೆ ಹೇಳಿದನು. ಇಂದಿನ ದಿನಗಳಲ್ಲಿ ಯಾವ ಅಧಿಕಾರಿಯೂ ಆ ರೀತಿಯಾದ ಆಪತ್ತನ್ನು ತಂದುಕೊಳ್ಳುವದಿಲ್ಲ! (12:2, 3). ಉತ್ತರ ಮೌನವಾಗಿತ್ತು! ಯಾವ ತಪ್ಪು ಹೊರಬರಲಿಲ್ಲ. ಅವನ ಇತಿಹಾಸ ಕಲೆ ಇಲ್ಲದ್ದಾಗಿತ್ತು.

ಸಮುವೇಲನ ಜೀವಿತವನ್ನು ಕ್ರೋಢೀಕರಿಸಿ ಸೇವೆಯ ವಿಷಯದಲ್ಲಿ ಅವನ ಭಾವನೆಯನ್ನು ಹೇಳುವ ಒಂದೇ ಪದ - ಮೀಸಲು. ಹನ್ನಳ ಉದರದಲ್ಲಿ ಮೂಡಿಬಂದ ದಿನದಿಂದ ತನ್ನ ಕೊನೆಯ ಉಸಿರು ಎಳೆಯುವವರೆಗೆ ಅವನ ಜೀವನ ದೇವರಿಗೆ ಮೀಸ ಲಾಗಿತ್ತು. ತಮ್ಮ ಮಾತು ಮತ್ತು ಕಾರ್ಯಗಳಲ್ಲಿ ಮೀಸಲಾಗಿರುವದಕ್ಕೆ ಇಷ್ಟ ಪಡುವ ಎಲ್ಲಾ ವಯಸ್ಸಿನವರಿಗೆ, ಸಮುವೇಲನ ಮೀಸಲಾದ ಜೀವನ ಗುಡುಗುವ ಸವಾಲಾಗಿದೆ.

### ಯೌವನಸ್ಥರಿಗೆ: ಉತ್ಸುಕತೆಯಿಂದ ಮೀಸಲಾಗಿರುವದಕ್ಕೆ ಸವಾಲು (2:11, 18-21; 3:1-21)

ಸಮುವೇಲನ ಮೊದಲ ಕೆಲವು ವರ್ಷಗಳು ಎರಡು ಸ್ಥಳಗಳಲ್ಲಿ ಕಳೆದವು. ಮೊದಲು ಅವನು ತನ್ನ ತಂದೆತಾಯಿಗಳೊಡನೆ ರಾಮದಲ್ಲಿದ್ದನು. ಬಹುಶಃ ಅವನ ಮೊದಲ ಮೂರು ವರ್ಷಗಳು ತನ್ನ ಮನೆಯಲ್ಲಿನ ಪ್ರಾರ್ಥನೆ ಮತ್ತು ಪ್ರೀತಿಯ ಬೋಧನೆಗಳಿಂದಾಗಿ ಅವನಲ್ಲಿ ಆಳವಾದ ಮತ್ತು ಶಾಶ್ವತವಾದ ಪರಿಣಾಮ ಬೀರಿತ್ತು. ಚಿಕ್ಕದರಲ್ಲಿ ಬೇರೂರಿದ ಪ್ರಭಾವವು ಅವನನ್ನು ಕೆಟ್ಟದ್ದಕ್ಕೆ ಹೋಗದಂತೆ ತಡೆದು ಒಳ್ಳೆದರ ಕಡೆಗೆ ನಡೆಸಿದವು. ತಾನು ದೇವರಿಗೆ ಮೀಸಲಾಗಿದ್ದೇನೆಂದು ತನ್ನ ಚಿಕ್ಕ ಪ್ರಾಯದಲ್ಲಿಯೇ ಸಮುವೇಲನು ಅರಿತುಕೊಂಡನು. ಅವನ ತಂದೆ ತಾಯಿಗಳು ಉದಾಹರಣೆಯ ಮತ್ತು ಬೋಧನೆಯ ಮೂಲಕ ವಿವರಿಸಿದ್ದುದರಿಂದ

ಮೀಸಲಾಗಿರುವದರ ಅರ್ಥವನ್ನು ಅವನು ಸರಳವಾಗಿ ಮತ್ತು ಬೇಗನೆ ತಿಳಿದುಕೊಂಡನು.

ಶೀಲೋವಿನಲ್ಲಿದ್ದ ದೇವದರ್ಶನದ ಗುಡಾರವು ಅವನ ಬಾಲ್ಯದಲ್ಲಿನ ಎರಡನೇಯ ಸ್ಥಳವಾಗಿತ್ತು. ಶೀಲೋವಿನಲ್ಲಿ, ಇಸ್ರಾಯೇಲ್ಯರ ಆರಾಧನೆಯ ಪರಿಶುದ್ಧ ವಸ್ತುಗಳ ಪರಿಚಯ ಪ್ರತಿನಿತ್ಯ ಸಮುವೇಲನಿಗೆ ಆಗುತ್ತಿತ್ತು. ಅಲ್ಲಿನ ಪರಿಶುದ್ಧ ಆಚರಣೆಗಳು ಅವನನ್ನು ನಿಧಾನ ವಾಗಿ, ದೃಢವಾಗಿ ಮತ್ತು ಬದಲಾಗದ ರೀತಿಯಲ್ಲಿ ಮುಂದಿನ ಸೇವೆಗೆ ಸಿದ್ಧಗೊಳಿಸಿದವು. ಯೌವನದಲ್ಲಿಯೇ ದೇವರಿಗೆ ಮೀಸಲಾಗಿರುವದಕ್ಕೆ ಸಮುವೇಲನಲ್ಲಿದ್ದ ಆಸಕ್ತಿಯು ಈ ಕೆಳಗಿನ ಕೆಲವು ವಿವರಣೆಯಲ್ಲಿ ಕಂಡು ಬರುತ್ತದೆ.

ಕೆಟ್ಟ ಪ್ರಭಾವಗಳಿಗೆ ಅವನು ಹೊರತಾಗಿರದಿದ್ದರೂ ದೇವರಿಗೆ ಭಯಭಕ್ತಿಯಿಂದ ನಡೆದುಕೊಂಡ ಯುವಕನಾಗಿದ್ದನು. ಸಮುವೇಲನ ವಯಸ್ಸು ಆಗ ಸುಮಾರು 15 ವರ್ಷವಿರಬಹುದೆಂದು ಕೆಲವು ವಚನಗಳು ಸೂಚಿಸತ್ತವೆ (2:18; 3:1). ದಿಕ್ಕುತೋಚದ, ಪ್ರತಿಭಟಿಸುವ, ಒತ್ತಡಕ್ಕೊಳಗಾಗುವ ಮತ್ತು ಗುರುತಿಸಿಕೊಳ್ಳುವ ವಯಸ್ಸಿದು. ಎಳೆತ ಕ್ಕೊಳಗಾಗಿ "ಗುಂಪನ್ನು ಹಿಂಬಾಲಿಸುವ" ಮನೋಭಾವನೆಯಿರುವ ವಯಸ್ಸಿದು. ಸಮುವೇ ಲನು ಈ ಎಲ್ಲ ಒತ್ತಡವನ್ನು ಎದುರಿಸಿ ದೇವರಿಗೆ ನಿಷ್ಟೆಯಿಂದ ನಡೆದನು. ಸಮುವೇಲನನ್ನು ಎದುರಿಸುತ್ತಿದ್ದ ಭಯಂಕರ ಪ್ರಭಾವಗಳಲ್ಲಿ ಏಲಿಯ ಮಕ್ಕಳು ಒಬ್ಬರಾಗಿದ್ದರು. ತಮ್ಮ ದುಷ್ಟ ಕಾರ್ಯಗಳಲ್ಲಿ ಪಾಲು ತೆಗೆದುಕೊಳ್ಳುವದಕ್ಕೆ ಹೊಫ್ನಿ ಮತ್ತು ಫಿನೇಹಾಸರು ಸಮುವೇಲನನ್ನು ಒತ್ತಾಯ ಮಾಡಿದರೂ ಅವನು ಅಲುಗಾಡಲಿಲ್ಲ. ದೇವರ ಕಡೆಗೆ ಅವರಿಗಿರುವ ತಿರಸ್ಕಾರ, ತಟಸ್ಥ ಮನೋಭಾವನೆ ಮತ್ತು ಪ್ರತಿಭಟನೆಯನ್ನು ಅವನು ಹಂಚಿಕೊಳ್ಳಬಹುದಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಅವನಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದ ಇಬ್ಬರೂ ಹುಡುಗರ ಕಾಮುಕತನಕ್ಕೆ ಸಮುವೇಲನ ಹದಿವಯಸ್ಸಿನ ದೇಹ ಶೋಧನೆಗೆ ಒಳಗಾಗಬಹುದಿತ್ತು, ಆದರೆ ಅವನು ನಿಷ್ಟಾವಂತನಾಗಿ ನಡೆದನು. ಕೆಟ್ಟ ಪ್ರಭಾವಗಳು ಅವನಿಗೆ ಎದುರಾದರೂ ಸಮುವೇ ಲನು ನೈತಿಕವಾಗಿಯೂ ಆತ್ಮಿಕವಾಗಿಯೂ ಬಲವಾಗಿ ಬೆಳೆದನು (2:21, ಲೂಕ 1:80). ಹೊಫ್ನಿ ಮತ್ತು ಫಿನೇಹಾಸರ ಭಾವನೆಗಳನ್ನು ಸಮುವೇಲನೊಂದಿಗೆ ಹೋಲಿಸಿರಿ. ಅವರು ಬಹುಶಃ ಅವನ ವಯಸ್ಸಿನವರೇ ಆಗಿರಬಹುದು, ಆದರೆ ಅವರು ಬಹಳವಾಗಿ ಬೇರೆಯಾಗಿದ್ದರು! (2:12, 18, 2:25, 26; 3:13, 19, 20). ಇದಕ್ಕೆ ಏನು ವಿವರಣೆ ಇದೆ? ಸಮುವೇಲನು ತನ್ನ ಯೌವನದಲ್ಲಿಯೂ ದೇವರಿಗೆ ಸಮರ್ಪಿಸಿಕೊಂಡಿದ್ದನು. ಸಮುವೇಲನು ದೇವರ ಸ್ವರವನ್ನು ಆಸಕ್ತಿಯಿಂದ ಕೇಳಲು ತವಕ ಪಟ್ಟನು! (3:10). ಸಮುವೇಲನ ಜೀವನದ ಕುರಿತು ಸಂಕ್ಷಿಪ್ತವಾಗಿ ಒಂದು ವಚನದಲ್ಲಿ ಹೇಳಬೇಕಾದರೆ ಅದು 3:10 ಅವನ ಹದಿ ವಯಸ್ಸಿನ ಮುಖ್ಯ ಮಾತು - ವಿಧೇಯತೆ. ದೇವರ ವಿಷಯದಲ್ಲಿ ಅವನಿಗೆ ಅತಿಯಾದ ಗೌರವವಿತ್ತು. "ಕೇಳುವುದು" ಎಂಬ ಪದವು, ಕೂಡಲೇ ವಿಧೇಯನಾಗುವದಕ್ಕೆ ಸಿದ್ಧನಾಗಿರುವದನ್ನು ಸೂಚಿಸುತ್ತದೆ. ಯೌವನಸ್ಥರೇ, ಈ ಪದವು ನಿಮ್ಮನ್ನು ಸೂಚಿಸುತ್ತದೆಯೋ? ನೀವು ದೇವರಿಗೆ ನಿಮ್ಮನ್ನು ಸಮರ್ಪಿಸಿಕೊಂಡಿದ್ದರೆ, ದೇವರ ಆಜ್ಞೆಗಳನ್ನು ಕೇಳುವಾಗ ಅದಕ್ಕೆ ವಿಧೇಯ ರಾಗುವದಕ್ಕೆ ಹಿಂಜರಿಯುವುದಿಲ್ಲ. ಬದಲಾಗಿ ಸಂತೋಷದಿಂದ ಅದನ್ನು ಕೈಗೊಳ್ಳುತ್ತೀರಿ (ಪ್ರಸಂಗಿ 12:1, 6).

ಸಮುವೇಲನು ಎಲ್ಲರಿಂದ ಗೌರವಿಸಲ್ಪಟ್ಟನು (2:26; 3:21; 4:1ಎ). ಹದಿವಯಸ್ಸಿನವನಾದ ಅವನು ಜವಾಬ್ದಾರಿಗಳನ್ನು ಹೊರುವದಕ್ಕೆ ಸಿದ್ಧನಾದನು (3:15). ಆಲಯದ ಬಾಗಲನ್ನು ತೆರೆಯುವದು ಒಂದು ಪ್ರಾಮುಖ್ಯವಾದ ಕೆಲಸವೇ ಸರಿ. ಅವನ ಜವಾ ಬ್ದಾರಿಯುತವಾದ ವರ್ತನೆಯಿಂದಾಗಿ ಅವನು ದೇವರ ಮನುಷ್ಯನೆಂದು ಹೆಸರು ವಾಸಿ ಯಾದನು. ಯೌವನಸ್ಥ ಮಕ್ಕಳೇ, ಈ ಸವಾಲನ್ನು ಸ್ವೀಕರಿಸಿ, ಜವಾಬ್ದಾರಿಯುತವಾಗಿ ವರ್ತಿಸಿರಿ, ಆಗ ನಿಮ್ಮ ಸುತ್ತಲಿನವರು ನಿಮ್ಮನ್ನು ಗೌರವಿಸುತ್ತಾರೆ (ಜ್ಞಾನೋಕ್ತಿ 3:1, 4; 1 ತಿಮೋಥೆ 4:12, 15; 5:22ಬಿ).

ಸಮುವೇಲನ ಜೀವನ ರಾಮದಿಂದ ಶೀಲೋವಿನಲ್ಲಿ ಮುಂದುವರಿಯಿತು. ಅವನ ಬಾಲ್ಯ ಮತ್ತು ಹದಿವಯಸ್ಸು ಶೀಲೋವಿನಲ್ಲಿ ಸೇವೆ ಮಾಡುವದರಲ್ಲಿ ಕಳೆಯಿತು. ಅವನು ಪ್ರಬುದ್ಧನಾದಾಗ ಅವನ ಸ್ಥಾನವು ಸುಭದ್ರವಾಗಿತ್ತು (3:19-4:1). ಶೀಲೋವಿನಲ್ಲಿ ಅವನಿಗಿದ್ದ ಮೊದಲ ದೇವದರ್ಶನ, ಇಸ್ರಾಯೇಲ್ಯರ ಎದುರು ಅವನ ಮಾತುಗಳು ದೃಢೀಕರಿಸಲ್ಪಟ್ಟದ್ದು ಮತ್ತು ಅವನ ಜವಾಬ್ದಾರಿಯುತವಾದ ವರ್ತನೆ ಅವನನ್ನು ಪ್ರಬುದ್ಧತಗೆ ನಡೆಸುವದರಲ್ಲಿ ಗೌರವ ಮತ್ತು ಧೈರ್ಯವನ್ನು ಕೊಟ್ಟಿತು.

## ವಯಸ್ಕರಿಗೆ: ಅಲುಗಾಡದ ಸಮರ್ಪಣೆಯ ಸವಾಲು (7:1-17)

ದೇವರ ಪ್ರವಾದಿಯೆಂದು ಸ್ಥಾಪಿಸಲ್ಪಟ್ಟ ಕೂಡಲೇ ಸಮುವೇಲನು ಶಿಲೋವಿನಿಂದ ಹೊರಟನು. ಮಂಜೂಷವು ಸ್ವಾಧೀನವಾದ (4:11) ಕೂಡಲೇ ಶೀಲೋವ್ ಫಿಲಿಷ್ಟಿಯರಿಗೆ ಸೋತುಹೋಯಿತು (ಕೀರ್ತನೆ 78:60). ಫಿಲಿಷ್ಟಿಯರ ದಬ್ಬಾಳಿಕೆಯಲ್ಲಿ ಇಸ್ರಾಯೇಲು ಬಹಳವಾಗಿ ಸಂಕಷ್ಟಕ್ಕೊಳಗಾಯಿತು. ರಾಮದಲ್ಲಿ ಸಮುವೇಲನ ಬರುವಿಕೆಯನ್ನು ಅನೇಕ ರೀತಿಯಲ್ಲಿ ವರ್ಣಿಸುತ್ತಾರೆ. ಕೆಲವರ ಪ್ರಕಾರ, ಎಲ್ಕಾನನಿಂದ ಅವನಿಗೆ ಭೂ ಸ್ವಾಸ್ಥ್ಯ ದೊರಕಿತ್ತು. ಹೊಫ್ನಿ ಫಿನೇಹಾಸರಿಂದ ಶೀಲೋವಿನ ಆರಾಧನೆಯಲ್ಲಿ ಕೆಟ್ಟ ಮಾರ್ಗವನ್ನು ಅವಲಂಭಿಸಿ ನಡೆದಿದ್ದರಿಂದ ಅವನು ಅಲ್ಲಿಂದ ಸ್ಥಳಾಂತರಿಸಿದನೆಂದು ಇನ್ನೂ ಕೆಲವರು ಹೇಳುತ್ತಾರೆ. ಆದರೆ ರಾಮವು ಸಮುವೇಲ ಮುಖ್ಯ ಸ್ಥಳವಾಯಿತು.

ರಾಮದಿಂದ ಇಪ್ಪತ್ತು ವರ್ಷಗಳ ವರೆಗೆ, ಸಮುವೇಲನು ಇಸ್ರಾಯೇಲ್ಯರನ್ನು ಪಶ್ಚಾತಾಪಕ್ಕೆ ಒತ್ತಾಯಿಸುತ್ತಿದ್ದನು. 7:3ರ ಮಾತುಗಳು ಸಮುವೇಲನ ಭಿನ್ನಹಗಳನ್ನು ಕ್ರೋಢಿಕರಿಸುತ್ತವೆ. ಇಪ್ಪತ್ತು ವರ್ಷಗಳ ಬೋಧನೆಯ ತರುವಾಯ ಅವನು ಇಸ್ರಾಯೇಲಿಯರನ್ನು ಮಿಜ್ಪದಲ್ಲಿ ಸೇರಿಸಿದನು. ಅಲ್ಲಿ ಯೆಹೋವನ ಬಳಿಗೆ ರಾಷ್ಟ್ರವು ಹಿಂತಿರುಗಬೇಕೆಂದು ಸಾರಿದನು. ಮಧ್ಯವಯಸ್ಸಿನಲ್ಲಿಯೂ ಸಮುವೇಲನಲ್ಲಿದ್ದ ಅಲುಗಾಡದ ಸಮರ್ಪಣೆಯನ್ನು ಈ ಮಿಜ್ಪದ ಕೂಟವು ತೋರಿಸಿತು.

ಸಮುವೇಲನ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವ ಮಧ್ಯವಯಸ್ಕರು, ಸಮರ್ಪಣೆಯ ಕುರಿತಾದ ಕೆಳಗಿನ ಅಂಶಗಳನ್ನು ಗಮನಿಸಬೇಕು.

ಸಮುವೇಲನು ಸಂಪ್ರೂರ್ಣವಾದ ಪಶ್ಚಾತಾಪಕ್ಕೆ ಕರೆ ನೀಡುವದಕ್ಕೆ ಭಯಪಡಲಿಲ್ಲ (7:3). ಪಾಪವನ್ನು ಖಂಡಿಸಿ, ಅನ್ಯರ ಪದ್ಧತಿಗಳಿಂದ ಸಂಪ್ರೂರ್ಣವಾಗಿ ಬೇರ್ಪಡಬೇಕೆಂದು ಇಸ್ರಾಯೇಲ್ಯರಿಗೆ ಒತ್ತಾಯಿಸಿದನು. ಇಸ್ರಾಯೇಲ್ಯರು ತಮ್ಮ ಪಾಪದ ಭಯಂಕರ ಚಿತ್ರವನ್ನು ಕಂಡುಕೊಳ್ಳುವದು ಮಾತ್ರವಲ್ಲ ಅವರು ದೇವರಲ್ಲಿ ಭರವಸೆ ಇಡುವದರ ಅವಶ್ಯಕತೆಯನ್ನು ತಿಳಿಸಿದನು. ಸಮುವೇಲನು ಪಾಪವನ್ನು ಖಂಡಿಸಿ ಅದನ್ನು ನೆಪವಾಗಿ ತೆಗೆದುಕೊಳ್ಳಲಿಲ್ಲ. ಪರಿಪೂರ್ಣ ಪಶ್ಚಾತಾಪವನ್ನು ಅಪೇಕ್ಷಿಸಿದನು! ದೇವರೊಂದಿಗೆ ಒಂದಾಗುವದಕ್ಕೆ ಇಸ್ರಾಯೇಲನ್ನು ಉತ್ತೇಜಿಸಿದನು (7:5). ನೀತಿಯನ್ನು ತರುವದಕ್ಕಾಗಿ ಏನನ್ನು ಮಾಡಲು ಸಿದ್ಧನಾಗಿದ್ದನು. ಅವನು ಇಸ್ರಾಯೇಲ್ಯರೊಂದಿಗೆ ಭಿನ್ನವಿಸಿದನು, ಬೇಡಿಕೊಂಡನು ಮತ್ತು ವಾದಿಸಿದನು.

ಅವನು ಉನ್ನತನೆಂದು ಪರಿಗಣಿಸಲ್ಪಟ್ಟನು (7:6) ಅವನ ಪ್ರಭಾವದಿಂದಾಗಿ ಇಸ್ರಾಯೇಲು ಒಟ್ಟಾಗಿ ಬರುವದಕ್ಕೆ ಮನವೊಲಿಸಿದನು. ರಾಷ್ಟ್ರವು ತನ್ನ ಪಾಪವನ್ನು ಮತ್ತು ಪ್ರತಿಭಟನೆಯನ್ನು ಅರಿಕೆ ಮಾಡಿ ದೇವರ ನಡೆಸುವಿಕೆಗೆ ಒಪ್ಪಿಸಿಕೊಟ್ಟಿತು. ಈ ಸಮಯದಲ್ಲಿ ಸಮುವೇಲನು "ನ್ಯಾಯಸ್ಥಾಪಕನೆಂದು" ನೇಮಿಸಲ್ಪಟ್ಟನು.

ಅವನು ನಾಯಕತ್ವವನ್ನು ಕೊಟ್ಟನು (7:8). ಇಸ್ರಾಯೇಲಿಗೆ ಸಹಾಯವು ಬೇಕಾದಾಗ ಅದು ತನ್ನನ್ನು ನಡೆಸುತ್ತಿದ್ದವನನ್ನು ದೃಷ್ಟಿಸಿತು. ಸಮುವೇಲನ ಜೀವನ, ಮಾದರಿ ಮತ್ತು ಬೋಧನೆ ಅವನನ್ನು ಉತ್ತಮ ನಾಯಕನನ್ನಾಗಿಸಿತು.

ಸಮುವೇಲನು ಪ್ರಾರ್ಥನೆಯನ್ನು ಉಪಯೋಗಿಸಿದನು ಮತ್ತು ಅದರ ಮೇಲೆ ಅವಲಂಭಿಸಿದನು (7:9). ಸಮುವೇಲನ ಪ್ರಾರ್ಥನೆಯ ಬಲದ ಕುರಿತು ಇಸ್ರಾಯೇಲಿನಲ್ಲಿ ಎಲ್ಲರಿಗೂ ತಿಳಿದಿತ್ತು. ಸಮುವೇಲನ ಪ್ರಾರ್ಥನೆಯಲ್ಲಿ ಜನರು ನಂಬಿಕೆಯಿಟ್ಟಿದ್ದರು. ದೇವರು ಸಮುವೇಲನ ಭಿನ್ನಹಗಳನ್ನು ಕೇಳಿ ಅದಕ್ಕೆ ಉತ್ತರಿಸುತ್ತಿದ್ದನು. ದೇವರಿಗೆ ಪ್ರಾರ್ಥನೆ ಮಾಡಿದವರಲ್ಲಿ ಪ್ರಾಮುಖ್ಯನಾಗಿ ಕೀರ್ತನೆ 99:6, ಸಮುವೇಲನನ್ನು ನಮೂದಿಸುವದು ಬಹಳ ಕುತೂಹಲಕರವಾಗಿದೆ. ಇಸ್ರಾಯೇಲಿಗೋಸ್ಕರ ಸಮುವೇಲನು ಪ್ರಾರ್ಥನೆಯ ಬಲವನ್ನು ಉಪಯೋಗಿಸಿ, ಬೇಡಿಕೊಂಡ ರೀತಿಯನ್ನು ಯೆರೆಮೀಯ 15:1 ಒಪ್ಪುತ್ತದೆ. ಸಮುವೇಲನು ಇಸ್ರಾಯೇಲಿನ ಬಿಡುಗಡೆಗಾಗಿ ಬೇಡಿ ಕೊಂಡನೆಂದು ಅವರಿಗೆ ತಿಳಿದಿತ್ತು. ಅದೇ ಅವರಿಗೆ ಯುದ್ಧದಲ್ಲಿ ಜಯದೊರಕಲು ಕಾರಣವಾಗಿತ್ತು (7:8; 8:6). ಸಮುವೇಲನೊಬ್ಬ ಸೇನಾಧಿಪತಿ, ಸೈನಿಕ ಅಥವಾ ಯುದ್ಧ ನೈಪುಣ್ಯವಿರುವವನಾಗಿರಲಿಲ್ಲ. ಅವನು ಯಾವ ಆಯುಧವನ್ನು ಕೊಡಲಾರದಿದ್ದರೂ ಪ್ರಾರ್ಥನೆಯನ್ನು ಮಾಡುತ್ತಿದ್ದನು. ಅದೇ ಯುದ್ಧದಲ್ಲಿ ಜಯಕೊಟ್ಟಿತು! (7:10, 11).

ಇಸ್ರಾಯೇಲು ದೇವರ ಮೇಲೆ ಆಶ್ರಯಕೊಳ್ಳಬೇಕೆಂದು ಸದಾಕಾಲ ನೆನಪು ಮಾಡಿಕೊಡುತ್ತಿದ್ದನು (7:12). ಇಸ್ರಾಯೇಲು ಇರುವದಾಗಿದ್ದರೆ ಅದು ದೇವರ ಬಲದಿಂದಲೇ ಎಂದು ಒತ್ತಿ ಹೇಳುತ್ತಿದ್ದನು!

ಸಮುವೇಲನೇ ಸಮಾಧಾನಕ್ಕೂ ಸಹಕಾರಕ್ಕೂ ಮತ್ತು ಆಶೀರ್ವಾದಕ್ಕೂ ಕಾರಣನಾಗಿದ್ದನು (7:13, 14). ಅವನ ಬೋಧನೆಯಿಂದ ಕುಲಗಳ ಮಧ್ಯದ ಹೊಟ್ಟೆಕಿಚ್ಚು ಮಾಯಾವಾಯಿತು. ಇಬ್ಭಾಗವಾಗಿದ್ದ ದೇಶ ಒಂದು ಗೂಡಿತು. ಆದುದರಿಂದ "ಅಖಂಡ ರಾಷ್ಟ್ರವಾಗುವದಕ್ಕೆ" ಅವನು ಮಾರ್ಗ ಮಾಡಿದನು.

ಅಂತ್ಯದಲ್ಲಿ ಅವನು ದೇವರ ಚಿತ್ತವನ್ನು ಕಲಿಸಿಕೊಡುವದರಲ್ಲಿ ತೊಡಗಿದನು (7:16). ಇಸ್ರಾಯೇಲು ದೇವರಿಗೆ ಸತ್ಯವಾಗಿ ನಡಕೊಳ್ಳಬೇಕಾದರೆ ಅವರಿಗೆ ದೇವರ ವಾಕ್ಯದ ಅವಶ್ಯಕತೆ ಇದೆ ಎಂದು ಅವನು ಅರಿತುಕೊಂಡಿದ್ದನು. "ಪ್ರವಾದಿಗಳ ಶಾಲೆಯನ್ನು" ಸ್ವತಃ ತಾನೇ ಪ್ರಾರಂಭಿಸಿದನು. ಅದು ಬೋಧನೆಯನ್ನು ಇಸ್ರಾಯೇಲಿನಲ್ಲಿ ಮುಂದುವರಿಸಿತ್ತು (19:3-5, 23, 24; 2 ಅರಸು 2).

ಹೀಗೆ, ಸಮುವೇಲನ ಯೌವನದ ಉತ್ಸುಕತೆ ಮತ್ತು ಶಕ್ತಿ ಕಡಿಮೆಯಾದಾಗಲೂ ಅವನ ಸಮರ್ಪಣೆಯ ಭಾವನೆ ಅವನು ವಯಸ್ಕನಾದಾಗಲೂ ಬಲವಾಗಿತ್ತು. ಅನೇಕ ತೊಂದರೆಗಳನ್ನು ಅವನು ಎದುರಿಸುತ್ತಿದ್ದುದರಿಂದ ಅವನು ಅದನ್ನು ಬಿಟ್ಟುಬಿಡಬಹುದಾಗಿತ್ತು. ಇಸ್ರಾಯೇಲನ್ನು ಮಿಜ್ಪಕ್ಕೆ ನಡಿಸಲು ಅವನು ಇಪ್ಪತ್ತು ವರ್ಷಗಳ ವರೆಗೆ ಬೋಧನೆ ಮಾಡಬೇಕಾಯಿತು. ಸಮುವೇಲನು ಯಾವಕಾಲಕ್ಕೂ ಸ್ಥಿರವಾ ಗಿದ್ದನು. ಭಯ, ಚಿಂತೆ ಮತ್ತು ಪಾಪದ ಕುರಿತು ಹೊರಾಡುತ್ತಿರುವ ಮಧ್ಯವಯಸ್ಕರು ಸಮುವೇಲನನ್ನು ದೃಷ್ಟಿಸಿ ಅವನಂತೆ ಸ್ಥಿರವಾಗಿರಬೇಕು. ಅವನಲ್ಲಿದ್ದ ನಿಷ್ಠೆಯನ್ನು ತಮ್ಮ ಜೀವನದಲ್ಲಿ ತೋರಿಸಬೇಕು.

## ಹಿರಿಯ ಭಕ್ತರಿಗೆ: ಸಂತೃಪ್ತಿಯ ಸರ್ಮಣೆಯ ಸವಾಲು
## (8:1-22; 9:6, 15-10:1, 17-25; 12:1-7, 19-25)

ಸಮುವೇಲನ ವೃದ್ಧಾಪ್ಯದಲ್ಲಿಯು ಅವನ ಸ್ಥಿರವಾದ ಸಮರ್ಪಣೆಯ ಭಾವ ಕಡಿಮೆಯಾಗಲಿಲ್ಲ. ಒಬ್ಬನ ಜೀವನವನ್ನು ಅವಲೋಕಿಸಿ ನೋಡಿ ಸಂತೃಪ್ತಿಪಡುವದರ ಕುರಿತು ಒಂದು ಅಮೂಲ್ಯ ಪಾಠವನ್ನು ಅಂತ್ಯದ ವರ್ಷಗಳಲ್ಲಿ ಕಲಿಯಬಹುದು. ಕೆಲವರು ತಮ್ಮ ಜೀವತವನ್ನು ಅವಲೋಕಿಸುವಾಗ ದುಃಖಪಡುತ್ತಾರೆ. ಆದರೆ ಸಮುವೇಲನ ವಿಷಯದಲ್ಲಿ ಅದು ಹಾಗಿರಲಿಲ್ಲ. ಅವನು ತನ್ನ ಜೀವಿತವನ್ನು ವ್ಯರ್ಥವಾಗಿ ಕಳೆಯಲಿಲ್ಲ.

ಹಿಂತಿರುಗಿ ನೋಡಿ ಅವಲೋಕಿಸಿದಾಗ ಅವನಿಗೆ ಸಂತೃಪ್ತಿ ಇತ್ತು.

ಮೊದಲಿಗೆ, ದೇವರಿಗೆ ಭಕ್ತಿಯಿಂದ ನಡೆದುದ್ದರಿಂದ ಅವನಿಗೆ ಸಂತೃಪ್ತಿಯಿತ್ತು. ಯಾವುದು ಸರಿ ಮತ್ತು ತಪ್ಪು ಎಂದು ಅವನ ಜೀವಿತವು ಯಾವಾಗಲೂ ಇತರರಿಗೆ ತೋರಿಸುತ್ತಿತ್ತು (8:1-15). ಒಂದು ಕಪ್ಪು ಚುಕ್ಕೆ ಅಂದರೆ ಅವನ ಮಕ್ಕಳು ಆದರೆ ಏಲಿಯ ಗದರಿಸಲ್ಪಟ್ಟಂತೆ ಸಮುವೇಲನು ಗದರಿಸಲ್ಪಡಲಿಲ್ಲ (2:29; 3:13). ಅವನ ಸುತ್ತಲಿದ್ದವರೂ ಕೂಡ ಅವನು ತನ್ನ ಮಕ್ಕಳನ್ನು ಸರಿಯಾಗಿ ಪಾಲಿಸಲಿಲ್ಲವೆಂದೋ ಅಥವಾ ಅವನ ಮುಖ್ಯ ತಪ್ಪುಗಳನ್ನು ಎತ್ತಿ ತೋರಿಸಲಿಲ್ಲ. ಯಾಕೆ? ಯಾಕೆಂದರೆ ಅವನು ಅವರ ನಡತೆಯನ್ನು ಸಮ್ಮತಿಸಲಿಲ್ಲ (12:2). ಕೆಲವು ಪ್ರಕಾರ ಸಮುವೇಲನು ತನ್ನ ಮಕ್ಕಳನ್ನು ಅಧಿಕಾರದಲ್ಲಿ ಇರಿಸದೇ ಅವರನ್ನು "ಇತರರಂತೆ" ಸಾಮಾನ್ಯವಾಗಿ ಲಿಸಿದನು. ಹಿರಿಯರು ಸೇರಿ ಬಂದಾಗ ಸಮುವೇಲನ ನಿಷ್ಠೆಯನ್ನು ಪ್ರಶ್ನಿಸದೇ, ಅವನ ಸಮರ್ಪಣೆಯ ವಿಷಯದಲ್ಲಿ ಮುಕ್ತವಾಗಿ ಮಾತಾನಾಡಿದರು. ಅನೇಕ ವರ್ಷಗಳವರೆಗೆ ಪಾಲಿಸುತ್ತಾ ಬಂದ ಮೌಲ್ಯಗಳ ಕುರಿತು ಮರುಕತೋರಿಸುವದು ಕೆಲವರಿಗೆ ವೃದ್ಧಾಪ್ಯವು ಒಂದು ಸಮಯವಾಗಿದೆ. ತಪ್ಪುಗಳನ್ನು ಖಂಡಿಸುವ ರೀತಿ ಸೌಮ್ಯವಾಗಿರುತ್ತದೆ ಮತ್ತು ತಪ್ಪುಗಳು ಮುಚ್ಚಿಹಾಕಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಸ್ವಜನರಿದ್ದರೆ ಆದರೆ ಇದು ಸಮುವೇಲನ ವಿಷಯದಲ್ಲಿರಲಲ್ಲ. ಅವನು ಸ್ಥಿರವಾಗಿದ್ದನು (ಕೀರ್ತನೆ 92:12-15; ಹೋಶೇಯನು 12:6; ಇಬ್ರಿಯ 10:23).

ಎರಡನೆಯದಾಗಿ, ಸಮುವೇಲನು ಸಂತೃಪ್ತಿಗೆ ಕಾರಣವೇನೆಂದರೆ, ಯೆಹೋವನ ವಿಷಯದಲ್ಲಿ ಅವನ ಭಾವೋದ್ವೇಗವು ಇನ್ನು ತೀವ್ರವಾಗಿತ್ತು (8:6). ಅರಸನು ಬೇಕೆಂಬ ಇಸ್ರಾಯೇಲ್ಯರ ಕೂಗು ಅನ್ಯ ನೆರೆಯವರಂತೆ ಇರಬೇಕೆಂಬ ಅವರ ಹಂಬಲವನ್ನು ತೋರಿಸಿತು. ಸಮುವೇಲನು "ಅಸಂತುಷ್ಟನಾದನು." ಆ ಪದದ ಮೂಲ ಇಬ್ರಿಯ ಮೂಲದಿಂದ ಬಂದದ್ದು. ಅದರ ಅರ್ಥ ವೇದನೆಯ ಭಾವನೆ, ಕೋಪ ಮತ್ತು ತಿರಸ್ಕಾರ. ಸಮುವೇಲನಿಗೆ ಈ ಬೇಡಿಕೆ ತಿಳಿದು ಬಂದಾಗ, ಅವನು ಬಹಳವಾಗಿ ಕೋಪಗೊಂಡನು. ಅವನು ವೇದನೆ ಪಟ್ಟನು. ಕಾರಣ ಅವನ ಮಕ್ಕಳ ಮೇಲಿನ ಆರೋಪ ವಲ್ಲ ಅಥವಾ ಅವನು ಬಹು ವೃದ್ಧನಾಗಿದ್ದಾನೆಂಬ ಅತಿಯಾದ ಮಾತುಗಳಲ್ಲ ಆದರೆ ಇಸ್ರಾಯೇಲು ದೇವರನ್ನು ತಳ್ಳಿಬಿಟ್ಟದ್ದೇ. 1 ಸಮುವೇಲ 10:17-25 ಸಮುವೇಲನಿಗಿದ್ದ ಅತಿಯಾದ ವೇದನೆಯನ್ನು ತಿಳಿಸುತ್ತದೆ. ಭಯಕಂರವಾದ ವಿರೋಧದ ಮಧ್ಯದಲ್ಲಿಯೂ ದೇವರ ಗೌರವಕ್ಕಾಗಿ ಸಮುವೇಲನು ಎದ್ದು ನಿಂತನು. ಅವನ ವಯಸ್ಸು ಅವನನ್ನು ಸುಮ್ಮನಿರುವಂತೆ ಮಾಡಲಿಲ್ಲ ಮತ್ತು ನಿರಾಶೆಯು ಅವನ ಉತ್ಸುಕತೆಯನ್ನು ತಣ್ಣಗೆ ಮಾಡಲಿಲ್ಲ. ದೇವರಿಗೊಸ್ಕರ ಅಭಿಮಾನವು ಎದ್ದು ಕಾಣುವಾಗ ಸಮರ್ಪಣೆಯ ಬಹು ಸುಂದರವಾಗಿ ತೋರಿಬರುತ್ತದೆ (ಕೀರ್ತನೆ 71:9; ಫಿಲೋಮೋನ 9).

ಮೂರನೇಯದಾಗಿ ಸಮುವೇಲನು ತನ್ನ ಇತಿಹಾಸದ ಕಾರಣದಿಂದಾಗಿ ಸಂತೃಪ್ತನಾಗಿದ್ದನು (9:6). ಅವನ ಹೆಸರು ಗೌರವ ಮತ್ತು ಭರವಸೆಯನ್ನು ಪಡೆದಿತ್ತು. ಅವನು "ದೇವರ ಮನುಷ್ಯನೆಂದು" ಹೆಸರು ಪಡೆದಿದ್ದನು. ಅವನು ತನ್ನ ಮೊದಲ ವರ್ಷಗಳನ್ನು ಉತ್ತಮವಾಗಿ ಕಳೆದಿದ್ದರಿಂದ, ಕೊನೆಯ ವರ್ಷಗಳಲ್ಲಿ ಅದು ಅವನಿಗೆ ಗೌರವತಂದಿತ್ತು. ಎಲ್ಲರೂ ಪಡೆಯುವದಕ್ಕೆ ಬಯಸುವ ಉತ್ತಮವಾದ ಶ್ಲಾಘನೆ ಇದಾಗಿದೆ. ನಮ್ಮ ವೃದ್ಧಾಪ್ಯದಲ್ಲಿ ಗೌರವವನ್ನು ನಾವು ಪಡೆಯಬಹುದೋ? (1 ಪೂರ್ವವೃತ್ತಾಂತ 29:28; ಜ್ಞಾನೋಕ್ತಿ 16:31).

ನಾಲ್ಕನೇಯದಾಗಿ, ಹಿಂಜರಿಯುವಂಥವರನ್ನು ಉತ್ತೇಜಿಸಿ, ದೇವರ ಸೇವೆಮಾಡುವದಕ್ಕೆ ಅವರಲ್ಲಿರುವ ಶಕ್ತಿಯನ್ನು ಗುರುತಿಸಿಕೊಳ್ಳುವಂತೆ ಅವರಿಗೆ ಸಹಾಯ ಮಾಡುತ್ತಿದುದ್ದರಿಂದ ಸಮುವೇಲನು ತೃಪ್ತಿಪಟ್ಟನು (9:20, 21). ಇದಕ್ಕೆ ಕಾರಣ ಬಹುಶಃ, ಇಸ್ರಾಯೇಲ್ಯರನ್ನು ದೇವರ ಸೇವೆಗೆ ಹಿಂತಿರುಗುವಂತೆಯೂ ಮತ್ತು ದೇವರನ್ನು ತಮ್ಮ ಅರಸನೆಂದು

ಗುರುತಿಸುವಂತೆಯೂ ಅವನು ಎಪ್ಪತ್ತು ವರ್ಷಗಳವರೆಗೆ ಸಮರ್ಪಿಸಿಕೊಂಡಿದ್ದನು. ಈಗ ಅವನು ಆ ದಿಕ್ಕನ್ನು ತೊರೆದು ವಿರುದ್ಧ ದಿಕ್ಕಿನಲ್ಲಿ ಹೋಗಬೇಕು! ಇದು ಅವನ ಶ್ರೇಷ್ಠವಾದ ನಿರ್ಧಾರಕ್ಕೆ ವಿರುದ್ಧವಾಗಿತ್ತು. ಅವನು ವೃದ್ಧನಾಗಿದ್ದು ತನ್ನ ಮಾರ್ಗಗಳನ್ನು ಬಲ್ಲವನಾಗಿದ್ದನು, ಉತ್ತಮವಾದ ಮಾರ್ಗ ಯಾವುದು ಎಂದು ಯಾವ ಸಂಶಯವಿಲ್ಲದೆ ಅರಿತುಕೊಂಡಿದ್ದನು. ಆದರೂ ಅವನು ಬದಲಾಗಬೇಕಾಯಿತು! (8:22). ಸಮುವೇಲನು, ಹೊಸ ಅರಸುತನವನ್ನು ಪ್ರಚಾರಮಾಡುವ ಒಬ್ಬ ನಿಷ್ಠಾವಂತ ಮತ್ತು ಚಾಣಾಕ್ಷನಾದ ವ್ಯಕ್ತಿಯಾದನು. ಅದನ್ನು ನಿರೂಪಿಸಲು ಆತನು ಸಲಹೆ ನೀಡಿದನು ಮತ್ತು ಸಂಘಟಿಸಿದನು. ಒಬ್ಬ ನಿಜವಾದ ವೀರನನ್ನಾಗಿ, ಈ ಕಾರ್ಯವು ಸಮುವೇಲನನ್ನು ವಿಶಿಷ್ಟಗೊಳಿಸಿತು! ಅವನು ಸೌಲನಿಗೆ ಉತ್ತೇಜನ, ಮಾರ್ಗದರ್ಶನ ಮತ್ತು ಸಲಹೆ ಕೊಟ್ಟನು. ಸೌಲನನ್ನು ಶ್ರೇಷ್ಠ ಅರಸನಾಗುವಂತೆ ಮಾಡಿದವನೇ ಸಮುವೇಲನು. ನಾವು ಒಪ್ಪಿಕೊಳ್ಳುವಂತೆಯೂ, ನಮ್ಮ ಅಧಿಕಾರವನ್ನು ಬಿಟ್ಟುಕೊಡುವಂತೆಯೂ ಮತ್ತು ನಮ್ಮ ಉತ್ತಮವಾದ ತೀರ್ಪಿಗೆ ವಿರುದ್ಧವಾದದ್ದನ್ನು ಮಾಡುವಂತೆಯೂ ಒತ್ತಾಯಿಸಲ್ಪಟ್ಟಾಗ ಏನಾಗುತ್ತದೆ? ನಾವು ಬದಲಾವಣೆಯ ವಿಷಯದಲ್ಲಿ ಒದ್ದು ಜಗಳಮಾಡುವ ಶೋಧನೆಗೆ ಒಳಗಾಗುತ್ತೇವೆ. ಒಂದು ವೇಳೆ ಒಪ್ಪಿಕೊಂಡರೂ, ಒಲ್ಲದ ಮನಸ್ಸಿನಿಂದಲೂ ಮತ್ತು ಅಸಮಧಾನದಿಂದಲೂ ಒಪ್ಪಿಕೊಳ್ಳುತ್ತೇವೆ. ಇಂಥ ಸಂದರ್ಭಗಳಲ್ಲಿ ಸಮುವೇಲನ ವೃದ್ಧಾಪ್ಯದಲ್ಲಿನ ತೃಪ್ತಿ ಮತ್ತು ಬದಲಾವಣೆಯನ್ನು ನೆನಪಿಸಿಕೊಳ್ಳಿರಿ ಮತ್ತು ಸಾಧ್ಯವಾದ ರೀತಿಯಲ್ಲಿ ದೇವಜನರಿಗೆ ಸಹಾಯ ಮಾಡಿರಿ! (1 ಕೊರಿಂಥ 9:19-23; ಅಪೊಸ್ತಲಕೃತ್ಯಗಳು 10:14). ಇದು ಒಬ್ಬ ಭಕ್ತನ ಭಾವನೆಯಾಗಿದೆ (ಫಿಲಿಪ್ಪಿ 2:3, 4).

ಐದನೇಯದಾಗಿ, ದೇವರಿಗಾಗಿ ತನ್ನ ಸಂಪೂರ್ಣ ಜೀವನವನ್ನೇ ಮುಡಿಪಾಗಿಡುವದರಲ್ಲಿ ಯಾವ ಬೇಸರಿಕೆ ಇರದ ಕಾರಣ ಸಮುವೇಲನು ತೃಪ್ತಿ ಹೊಂದಿದನು. 12:1-7ರಲ್ಲಿ, ಸಮುವೇಲನು ತನ್ನ ಜೀವನವನ್ನು ಅವಲೋಕಿಸಿದನು. ಅಲ್ಲಿ ಎಲ್ಲರೂ ಸೇರಿ ಬಂದಿದ್ದರಿಂದ ಅದು ಎಲ್ಲರಿಗೂ ತಿಳಿದಿತ್ತು (12:2ಬಿ). ಅವನ ಜೀವನದಲ್ಲಿ ಯಾವ ಅಕ್ರಮವಿರಲಿಲ್ಲ ಮತ್ತು ಅವನು ದೇವರನ್ನು ಯಾವಾಗಲೂ ಘನಪಡಿಸಿದ್ದನು. ಅನ್ಯಾಯವಾದದನ್ನು ಅವನು ಯಾವಾಗಲೂ ಮಾಡಲಿಲ್ಲ. ಒಬ್ಬನು ತನ್ನ ಜೀವನವನ್ನು ಅವಲೋಕಿಸಿ ಅದರಲ್ಲಿ ಯಾವದನ್ನು ಸರಿಪಡಿಸುವ ಅವಶ್ಯಕತೆಯನ್ನು ಕಾಣದಿದ್ದರೆ ಅದು ಬಹು ಆಶೀರ್ವಾದದಾಯಕ ಜೀವನವಾಗಿದೆ! ಅದು ದೇವರಿಗೆ ಅರ್ಪಿಸುವ ಆಶೀರ್ವಾದದಾಯಕವಾದ ಸಮರ್ಪಣೆಯಾಗಿದೆ (2 ತಿಮೊಥೆ 4:6, 7).

## ಮರಣದಲ್ಲಿ: ಪ್ರತಿಫಲವನ್ನು ಪಡೆದ ಸಮರ್ಪಣೆ ಜೀವಿತದ ಸವಾಲು (25:1; 28:12-19)

ಅವನು ಮರಣವಾದಾಗ ಅವನನ್ನು ನಿಜವಾಗಿಯೂ ಎಲ್ಲರೂ ಕಳಕೊಂಡರು. ಅವನ ಜೀವನವು ಅಷ್ಟು ಪ್ರಭಾವ ಬೀರಿತ್ತು. "ಎಲ್ಲಾ ಇಸ್ರಾಯೇಲು" ದುಃಖಿಸಿತು (25:1; ಆದಿಕಾಂಡ 15:15).

ಸತ್ತವರಲ್ಲಿ ವಿಚಾರಿಸುವ ಎಂದೋರಿನ ಸ್ತ್ರೀಯ ಬಳಿ ಸೌಲನು ಬಂದಾಗ ಸಮುವೇಲನ ಮರಣದ ಕುರಿತು ಕೆಲವು ವಿಷಯಗಳು ತಿಳಿದು ಬಂದಿತು (28:12-19): ಅವನು ತನ್ನ ವಿಶ್ರಾಂತಿಯನ್ನು "ಆನಂದಿಸುತ್ತಿದ್ದನು" (28:15); ಆತನ ಮರಣ ನಂತರದ ಖ್ಯಾತಿಯು, ಅವರ ಗೌರವವನ್ನು ಹೊರತಂದಿತು (28:15ಬಿ); ಮರಣ ನಂತರವೂ ಸಮುವೇಲನು ಭಕ್ತಿಯನ್ನು ಅನುಸರಿಸುವಂತೆ ಅವರನ್ನು ಒತ್ತಾಯಿಸಿದನು (28:18, 19).

ಸಮುವೇಲನಂತೆ ಬದುಕಿರುವವರನ್ನು ಸತ್ತವರು ಸಂಪರ್ಕಿಸುವದು ಅಸಾಧ್ಯ

ವಾದರೂ, ಸಮುವೇಲನಂತೆ ಅವರು ಜೀವಿಸಿದ್ದರೆ, ಅವರ ನಿತ್ಯತ್ವದ ಕುರಿತು ಭರವಸೆ ಹೊಂದಬಹುದು. ದೇವರಲ್ಲಿ ಭಯಭಕ್ತಿಯಿಂದ ಜೀವಿಸಿ ಮರಣ ಹೊಂದಿದ ನಂತರ, ನಿತ್ಯ ವಿಶ್ರಾಂತಿಯನ್ನು ಪಡೆಯುವರು (ಪ್ರಕಟಣೆ 14:13). ವಿಶ್ವಾಸಿಗಳ ಸ್ಮರಣೆಯು ಭಯಮಿಶ್ರಿತ ಆಶ್ಚರ್ಯ ಮತ್ತು ಗೌರವವನ್ನು ಹೊಂದುತ್ತದೆ (ಇಬ್ರಿಯ 12:1; 13:7). ಭಕ್ತರು ತಮ್ಮ ಭೂಲೋಕದ ಅನುಭವಗಳ ಮೂಲಕ ಯೆಹೋವ ದೇವರಿಗೆ ಸಮರ್ಪಿಸಿಕೊಳ್ಳುವುದಕ್ಕೆ ಮರಣಾನಂತರವೂ ಎಚ್ಚರಿಸುತ್ತಾರೆ.

## ಮುಕ್ತಾಯ

ಸಮುವೇಲನನ್ನು ಕುರಿತು ನಿಮ್ಮ ಆಲೋಚನೆ ಏನು? ಅವನ ಜೀವನವು ಬಹು ಸುಂದರವಾಗಿತ್ತು. ಒಬ್ಬ ಬಾಲಕನಾಗಿದ್ದಾಗ ಅವನು ಉತ್ಸುಕತೆಯಿಂದ ದೇವರ ಸೇವೆ ಗೆ ತನ್ನನ್ನು ಸಮರ್ಪಿಸಿಕೊಂಡನು. ಒಬ್ಬ ಮಧ್ಯವಯಸ್ಕನಾಗಿದ್ದಾಗ ಅವನು, ಸತ್ಯವನ್ನು ಎತ್ತಿ ಹಿಡಿಯುವದಕ್ಕೂ ತಪ್ಪನ್ನು ಬಯಲು ಮಾಡುವದಕ್ಕೂ ಮತ್ತು ಇಸ್ರಾಯೇಲನ್ನು ದೇವರ ಬಳಿಗೆ ನಡೆಸುವದಕ್ಕೂ ತನ್ನನ್ನು ಸ್ಥಿರವಾಗಿ ಸಮರ್ಪಿಸಿಕೊಂಡನು. ಒಬ್ಬ ಹಿರಿಯ ನಾಗರಿಕನಾಗಿ, ವಯಸ್ಸು ಮೀರಿತ್ತಾ, ಕೂದಲೂ ಬಿಳಿಯಾದಾಗಲೂ ಅವನು ಸಂತೃಪ್ತನಾಗಿದ್ದನು. ಮರಣಹೊಂದಿದ ಒಬ್ಬ ಭಕ್ತನಾಗಿ ಅವನ ಸಮರ್ಪಣೆಯು ವಿಶ್ರಾಂತಿ, ಗೌರವ ಮತ್ತು ಉತ್ತೇ ಜನದ ಪ್ರತಿಫಲವನ್ನು ಹೊಂದಿದನು.

ಸಮುವೇಲನು ನಿಂದಾರಹಿತನಾಗಿಯೂ ಮತ್ತು ತನ್ನ ಸರಿಸಮಾನದವರಲ್ಲಿ ಉನ್ನತನ್ನಾಗಿಯೂ ಇರುವದಕ್ಕೆ ಅವನ ಸಮರ್ಪಣೆಯು ಶಕ್ತಗೊಳಿಸಿತು. ಅವನ ಭಕ್ತಿಯ ಗುಣದಿಂದ ಇಸ್ರಾಯೇಲಿನ ನೈತಿಕತೆ ನಾಶವಾಗುವದನ್ನು ತಪ್ಪಿಸಿದ್ದೇ ಇಸ್ರಾಯೇಲಿಗೆ ಅವನ ಕೊಡುಗೆಯಾಗಿದೆ. ಮತ್ತು ಅವನು ದಾವೀದನ ಮುಖಾಂತರ ಮೆಸ್ಸಿಯನು ಬರುವದಕ್ಕೆ ಬುನಾದಿ ಹಾಕಿದನು. ಜೀವನದ ಯಾವುದೇ ಸಮಯದಲ್ಲಿದ್ದರೂ, ಸಮು ವೇಲನ ಜೀವನವು ದೇವರಿಗೆ ಸಮರ್ಪಿಸಿಕೊಳ್ಳುವದಕ್ಕೆ ನಿಮ್ಮನ್ನು ಒತ್ತಾಯಿಸುತ್ತದೆ (12:24). ಯೆಹೋವ ನಿಗೆ ಸಮರ್ಪಿತ ಜೀವಿತವು ಪ್ರತಿಫಲಕೊಡುವಂತದ್ದಾಗಿದೆ ಎಂದು ಒಂದು ಮಗುವಿನ ತೊಟ್ಟಿಲಿನಿಂದ ಹಿಡಿದು ಹಿರಿಯ ಭಕ್ತನ ಸಮಾಧಿಯವರೆಗೆ, ಸಮುವೇಲನು ತೋರಿಸಿದ್ದಾನೆ! (ಯೆಶಾಯ 46:3, 4).

ತಮ್ಮ ಕುರಿಗಳಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಈ ರೀತಿಯಾಗಿ ಆಯ್ದುಕೊಳ್ಳು ವದು ಯಹೂದ್ಯರ ಪದ್ಧತಿಯಾಗಿತ್ತು. ಕುರಿಗಳನ್ನು ಏರಿಯಿಂದ ಬೇರ್ಪಡಿಸುತ್ತಿದ್ದರು. ಮತ್ತು ಹೊರ ಹೋಗುವದಕ್ಕೆ ಒಂದೇ ಒಂದು ಚಿಕ್ಕ ಮಾರ್ಗವಿರುವ ಕುರಿ ಕೊಟ್ಟಿಗೆಗೆ ಸೇರಿಸುತ್ತಿದ್ದರು. ಏರಿಯು ಹೊರಬಾಗಿಲ ಹತ್ತಿರವಿರುತ್ತಿತ್ತು. ಹೊರಬಾಗಿಲ ಹತ್ತಿರ ನಿಂತ ಒಬ್ಬ ವ್ಯಕ್ತಿಯು, ಕೋಲನ್ನು ಕವಿಮಣ್ಣಿನಲ್ಲಿ ಅದ್ದಿ ಪ್ರತಿ ಹತ್ತನೆಯ ಕುರಿಯನ್ನು ಮುಟ್ಟುತ್ತಿದ್ದನು. ಅದನ್ನು ಗುರುತಿಸಿ ಹೀಗೆ ಹೇಳುತ್ತಿದ್ದನು - "ಇದು ಮೀಸಲಾಗಿರಲಿ." ಈ ಚಿತ್ರವನ್ನು ಯೆಹೆಜ್ಕೇಲನು ಉಪಯೋಗಿಸಿ ಹೀಗೆ ಹೇಳುತ್ತಾನೆ, "ದನಗಳೇಯಾಗಲಿ ಆಡುಕುರಿಗಳೇಯಾಗಲಿ ಒಡೆಯನು ಲೆಕ್ಕಿಸಿದ ಎಲ್ಲಾ ಪಶುಗಳಲ್ಲಿ ಪ್ರತಿ ಹತ್ತನೆಯದು ಯೆಹೋವನಿಗೆ ಮೀಸಲಾಗಿರಬೇಕು" (ಯಾಜಕಕಾಂಡ 27:32; ಯೆರೆಮೀಯ 33:13). ಪ್ರತಿಯೊಬ್ಬನೂ ತಾನು "ಲೆಕ್ಕಿಸಲ್ಪಟ್ಟಿದ್ದೇ ನೆಂದು" ತಿಳಿದುಕೊಳ್ಳಲಿ ಮತ್ತು ಸಮುವೇಲನಂತೆ - "ಮೀಸಲಾಗಿರಿ."